2049(2532)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಡಿಸಿಸಿ ಬ್ಯಾಂಕ್ ಮುಂತಾದ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳ ನೌಕರರು ಅಲ್ಲಿಯೇ ಕೆಲಸಕ್ಕೆ ಸೇರಿ ಅಲ್ಲಿಯೇ ನಿವೃತ್ತರಾಗಿರುವ ಪ್ರಸಂಗ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಇದರಿಂದಾಗಿ ಸಹಕಾರಿ ಬೆಳವಣಿಗೆ ಕುಂಠಿತಗೊಳ್ಳುವ ಸಂಭವ ಇಲ್ಲವೇ?

3 ಈ ನೌಕರರು ವರ್ಗಾವಣೆ ಭಯ ಇಲ್ಲದೆ ಸ್ವಹಿತಾಸಕ್ತಿ ಬೆಳೆಸಿಕೊಂಡು ಜಿಲ್ಲಾ ಮಟ್ಟದವರೆಗಿನ ಚುನಾವಣೆಗಳಲ್ಲಿ ಪರೋಕ್ಷವಾಗಿ ಭಾಗವಹಿಸುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಈ ಅನಪೇಕ್ಷಣೀಯ ಬೆಳವಣಿಗೆಯನ್ನು ತಪ್ಪಿಸಲು ಈ ನೌಕರರ ವರ್ಗಾವಣೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಕಿಕೊಂಡಿರುವ ಬೆಳವಣಿಗೆಗಳೇನು? ಯಾವಾಗ ಜಾರಿಗೆ ಬರಲಾಗುವುದು? (ವಿವರ ನೀಡುವುದು).

ಶ್ರೀ ಡಿ.ಕೆ.ಶಿವಕುಮಾರ (ಸಹಕಾರ ಸಚಿವರು):

1. ಬಂದಿದೆ.

2. ಇಲ್ಲ.

3. ಬಂದಿರುವುದಿಲ್ಲ.

4. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮುಂತಾದ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳ ನೌಕರರ ವರ್ಗಾವಣೆಯ ಅಧಿಕಾರ ಸಂಬಂಧಪಟ್ಟ ಆಡಳಿತ ವರ್ಗದ ಅಧೀನಕ್ಕೆ ಒಳಪಟ್ಟಿರುವುದರಿಂದ ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿ ತೋಟಗಾರಿಕಾ ಫಾರಂಗಳ ಕಾರ್ಯನಿರ್ವಹಣೆ

2050(2533)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಹಾಗೂ ತಾಲ್ಲೂಕಿನಲ್ಲಿ ಎಷ್ಟು ತೋಟಗಾರಿಕೆ ಫಾರಂಗಳಿದೆ?

ಆ) ಇದರಲ್ಲಿ ಆದಾಯ ಗಳಿಸುತ್ತಿರುವ ಫಾರಂಗಳೆಷ್ಟು? ನಷ್ಟದಲ್ಲಿರುವ ಫಾರಂಗಳೆಷ್ಟು?

ಇ) ನಷ್ಟದಲ್ಲಿರುವ ತೋಟಗಾರಿಕೆ ಫಾರಂಗಳನ್ನು ಖಾಸಗೀಕರಣಗೊಳಿಸುವ ಇಚ್ಛೆ ಸರ್ಕಾರಕ್ಕೆ ಇದೆಯೇ?

ಈ) ಇವುಗಳನ್ನು ಹಾಪ್‌ಕಾಮ್ಸ್‌ಗಳನ್ನಾಗಿ ಅಥವಾ ತರಬೇತಿ ಫಾರಂಗಳನ್ನಾಗಿ ಪರಿವರ್ತಿಸುವ ಇಚ್ಛೆ ಸರ್ಕಾರಕ್ಕೆ ಇದೆಯೇ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) 34.

ಆ) ಆದಾಯಗಳಿಸುತ್ತಿರುವ ಫಾರಂಗಳು - 10, ನಷ್ಟದಲ್ಲಿರುವ ಫಾರಂಗಳು - 24.

ಇ) ಇದೆ.

ಈ) ಇಲ್ಲ.

ಮೈಸೂರು ತಾಲ್ಲೂಕು ಕಂದಾಯ ಗ್ರಾಮಗಳ ವಿವರ

2052(2535)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೈಸೂರು ತಾಲ್ಲೂಕಿನಲ್ಲಿ ಇರುವ ಗ್ರಾಮಗಳ ಸಂಖ್ಯೆ ಎಷ್ಟು? ಅವುಗಳ ವಿಸ್ತೀರ್ಣವೆಷ್ಟು? ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

2. ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಇರುವ ಅಡಚಣೆಗಳೇನು?

3. ಸರ್ಕಾರಿ ಭೂಮಿಯಲ್ಲಿ ಎಷ್ಟು ಕಡೆ ಮನೆ ಕಟ್ಟಲಾಗಿದೆ?